**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**

**ಬೆಂಗಳೂರು**

**ಯುಜಿಸಿಇಟಿ–2021 – ಇಂಜಿನಿಯರಿಂಗ್ / ಆರ್ಕಿಟೆಕ್ಚರ್ / ಕೃಷಿ ವಿಜ್ಞಾನ / ವೆಟರಿನರಿ / ಫಾರ್ಮ ಸೈನ್ಸ್ / ಫಾರ್ಮಸಿ / ನ್ಯಾಚುರೋಪತಿ ಮತ್ತು ಯೋಗ ಕೋರ್ಸುಗಳಿಗೆ ಮೊದಲನೇ ಸುತ್ತಿನ ಸೀಟು ಹಂಚಿಕೆ**

**ಸೀಟು ಹಂಚಿಕೆಯ ನಂತರದ ಕಾರ್ಯವಿಧಾನಗಳು – Choice ಗಳನ್ನು ಆಯ್ಕೆ ಮಾಡುವುದು.**

**ದಿನಾಂಕ: 27-11-2021**

ಮೊದಲನೇ ಸುತ್ತಿನ ನೈಜ ಸೀಟು ಹಂಚಿಕೆಯ ಫಲಿತಾಂಶವನ್ನು ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದ ನಂತರ ಅಭ್ಯರ್ಥಿಗಳಿಗೆ ಈ ಕೆಳಗೆ ವಿವರಿಸಿರುವಂತೆ ನಿರ್ಣಯಗಳನ್ನು ತೆಗೆದುಕೊಳ್ಳಬಹುದಾಗಿರುತ್ತದೆ.

ಮೊದಲನೇ ಸುತ್ತಿನ ಸೀಟು ಹಂಚಿಕೆಯ ನಂತರ, ಸೀಟು ಹಂಚಿಕೆಯಾದ ಅಭ್ಯರ್ಥಿಗಳಿಗೆ ವಿವಿಧ ನಾಲ್ಕು Choice ಗಳನ್ನು ನೀಡಲಾಗುವುದು. ಅಭ್ಯರ್ಥಿಗಳು ನಾಲ್ಕು Choice ಗಳಲ್ಲಿ ತಮಗೆ ಸರಿ ಎನಿಸುವ ಯಾವುದಾದರೂ ಒಂದು Choice ಅನ್ನು ಆಯ್ಕೆ ಮಾಡುವ ಮೊದಲು, ಪ್ರತಿ Choice ಗಳ ವಿವರಣೆಯನ್ನು ಓದಿ ಸರಿಯಾಗಿ ಅರ್ಥೈಸಿಕೊಂಡು, ತಮಗೆ ಸೂಕ್ತವೆನಿಸಿದ Choice ಅನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿದೆ. ನಾಲ್ಕು Choice ಗಳಲ್ಲಿ ಯಾವುದೇ Choice ಅನ್ನು ಆಯ್ಕೆ ಮಾಡದಿರುವ ಅಭ್ಯರ್ಥಿಗಳು ಮುಂದಿನ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆಯುವುದಿಲ್ಲ.

ಅಭ್ಯರ್ಥಿಗಳು CHOICE ಗಳನ್ನು ಆಯ್ಕೆ ಮಾಡಿಕೊಳ್ಳಲು, ಚಲನ್ ಅನ್ನು ಡೌನ್ ಲೋಡ್ ಮಾಡಿಕೊಳ್ಳಲು, ಬ್ಯಾಂಕಿನಲ್ಲಿ ಶುಲ್ಕ ಪಾವತಿ ಮಾಡಲು ಮತ್ತು ಪ್ರವೇಶ ಆದೇಶ ಪತ್ರವನ್ನು ಡೌನ್ ಲೋಡ್ ಮಾಡಿಕೊಳ್ಳಲು ಪ್ರಾಧಿಕಾರಕ್ಕೆ ಭೇಟಿ ನೀಡುವ ಅವಶ್ಯಕತೆ ಇರುವುದಿಲ್ಲ. ಈ ಮೇಲಿನ ಎಲ್ಲಾ ಚಟುವಟಿಕೆಗಳಿಗೆ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಗೆ ಭೇಟಿ ನೀಡಲು ಕೋರಿದೆ.

ಮೊದಲನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳಿಗೆ ಯಾವುದೇ Choice ಅನ್ನು ಆಯ್ಕೆ ಮಾಡುವ ಅವಕಾಶ ಇರುವುದಿಲ್ಲ. ಅಂತಹ ಅಭ್ಯರ್ಥಿಗಳು ಈಗಾಗಲೇ ದಾಖಲಿಸಿರುವ ಇಚ್ಛೆ / ಆಯ್ಕೆಗಳೊಂದಿಗೆ ಮುಂದಿನ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು.

ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾದ ಅಭ್ಯರ್ಥಿಗಳಿಗೆ Choice ಗಳ ವಿವರಣೆಯನ್ನು ಹಾಗು Choice ಆಯ್ಕೆ ಮಾಡಿಕೊಂಡ ನಂತರದ ಕ್ರಮಗಳನ್ನು ಮುಂದಿನ ಪುಟಗಳಲ್ಲಿ ನೀಡಲಾಗಿದೆ.

- ಯುಜಿಸಿಇಟಿ (ಇಂಜಿನಿಯರಿಂಗ್ / ಆರ್ಕಿಟೆಕ್ಚರ್ / ಫಾರ್ಮ ಸೈನ್ಸ್ / ವೆಟರಿನರಿ / ಫಾರ್ಮಸಿ, ನ್ಯಾಚರೋಪತಿ ಮತ್ತು ಯೋಗ ಮುಂತಾದ) ಕೋರ್ಸುಗಳ ಮೊದಲನೇ ಸುತ್ತಿನ ಸೀಟು ಹಂಚಿಕೆಯ ನಂತರ ಸೂಕ್ತವಾದ Choice ಅನ್ನು ಆಯ್ಕೆ ಮಾಡುವುದರಿಂದ ಯುಜಿನೀಟ್ ವೈದ್ಯಕೀಯ ಅಥವಾ ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಭಾಗವಹಿಸಬಹುದು.
- ಯುಜಿಸಿಇಟಿ (ಇಂಜಿನಿಯರಿಂಗ್ / ಆರ್ಕಿಟೆಕ್ಚರ್ / ಫಾರ್ಮ ಸೈನ್ಸ್ / ವೆಟರಿನರಿ / ಫಾರ್ಮಸಿ, ನ್ಯಾಚರೋಪತಿ ಮತ್ತು ಯೋಗ ಮುಂತಾದ) ಕೋರ್ಸುಗಳಿಗೆ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗುವ ಸೀಟಿಗೆ ಅಭ್ಯರ್ಥಿಗಳು, Choice-1 ಅನ್ನು ಆಯ್ಕೆ ಮಾಡಿದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಯುಜಿನೀಟ್ ವೈದ್ಯಕೀಯ ಅಥವಾ ದಂತ ವೈದ್ಯಕೀಯ ಸೀಟು ಹಂಚಿಕೆಗೆ ಪರಿಗಣಿಸುವುದಿಲ್ಲ ಅಥವಾ ಎರಡನೇ ಸುತ್ತಿನ ಇಂಜಿನಿಯರಿಂಗ್ ಸೀಟುಗಳ ಹಂಚಿಕೆಗೂ ಸಹ ಪರಿಗಣಿಸುವುದಿಲ್ಲ.
- ಆದ್ದರಿಂದ ಇಂಜಿನಿಯರಿಂಗ್ / ಆರ್ಕಿಟೆಕ್ಚರ್ / ಫಾರ್ಮ ಸೈನ್ಸ್ / ವೆಟರಿನರಿ / ಫಾರ್ಮಸಿ, ನ್ಯಾಚರೋಪತಿ ಮತ್ತು ಯೋಗ ಮುಂತಾದ ಕೋರ್ಸುಗಳ ಸೀಟು ಹಂಚಿಕೆಯ ಮೊದಲನೇ ಸುತ್ತಿನಲ್ಲಿ, ಸೀಟು ಹಂಚಿಕೆಯಾಗುವ ಅಭ್ಯರ್ಥಿಗಳು ಸೂಕ್ತವಾದ Choice ಅನ್ನು ಆಯ್ಕೆ ಮಾಡಿದಲ್ಲಿ ವೈದ್ಯಕೀಯ / ದಂತ ವೈದ್ಯಕೀಯ ಸೀಟು ಹಂಚಿಕೆಯಲ್ಲಿ ಅಥವಾ ಎರಡನೇ ಸುತ್ತಿನ ಇಂಜಿನಿಯರಿಂಗ್ ಇತ್ಯಾದಿ ಕೋರ್ಸುಗಳ ಹಂಚಿಕೆಗೆ ಭಾಗವಹಿಸಲು ಅರ್ಹತೆ ಪಡೆಯಬಹುದು.
- ಅಭ್ಯರ್ಥಿಗಳು ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳಿಗೆ ಯುಜಿನೀಟ್ 2021 ರಲ್ಲಿ ಮತ್ತು ಯುಜಿಸಿಇಟಿ–2021 ರಲ್ಲಿಯೂ ಸಹ ಅರ್ಹತೆ ಪಡೆದಿರುತ್ತಾರೆ. ಅಂತಹ ಅಭ್ಯರ್ಥಿಗಳು ಒಂದು ವೇಳೆ ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳಿಗೆ ಸೀಟುಗಳಿಗೆ ಪ್ರವೇಶ ಪಡೆದಲ್ಲಿ, ಅಭ್ಯರ್ಥಿಗಳು ಹೊಂದಿದ್ದ ಇಂಜಿನಿಯರಿಂಗ್ ಇತ್ಯಾದಿ ಸೀಟುಗಳು ತಂತಾನೆ ರದ್ದುಗೊಳ್ಳುತ್ತದೆ. ಈ ರೀತಿ ರದ್ದುಗೊಳ್ಳುವ ಇಂಜಿನಿಯರಿಂಗ್ ಇತ್ಯಾದಿ ಸೀಟುಗಳನ್ನು ನಂತರದ ಸೀಟು ಹಂಚಿಕೆಯಲ್ಲಿ ಪರಿಗಣಿಸಲಾಗುವುದು. ಆದ್ದರಿಂದ;
- ಅಭ್ಯರ್ಥಿಗಳು ನಾಲ್ಕು Choice ಗಳಲ್ಲಿ ತಮಗೆ ಸರಿ ಎನಿಸುವ ಯಾವುದಾದರೂ ಒಂದು Choice ಅನ್ನು ಆಯ್ಕೆ ಮಾಡುವ ಮೊದಲು, ಪೋಷಕರೊಡನೆ ಚರ್ಚಿಸಿ, ಮುಂಬರುವ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ನಿಗದಿಪಡಿಸಿರುವ ಮಾನದಂಡಗಳನ್ನು ಮನನ ಮಾಡಿಕೊಂಡು, ಪ್ರತಿ Choice ಗಳ ವಿವರಣೆಯನ್ನು, ಓದಿ ಸರಿಯಾಗಿ ಅರ್ಥೈಸಿಕೊಂಡು, ತಮಗೆ ಸೂಕ್ತವೆನಿಸಿದ Choice ಅನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿದೆ.
- ಒಂದು ವೇಳೆ ಅಭ್ಯರ್ಥಿಗಳು ಯಾವುದೇ ಬದಲಾವಣೆ ಬೇಡ ಎಂದೆನಿಸಿದಲ್ಲಿ ಮಾತ್ರ Choice 1 ಅನ್ನು ಆಯ್ಕೆ ಮಾಡಬಹುದು. ಮುಂದಿನ ಯಾವುದೇ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಂಡು Choice 1 ಅನ್ನು ಆಯ್ಕೆ ಮಾಡಲು ಸೂಚಿಸಿದೆ.
- ಅದೇ ರೀತಿ ವೈದ್ಯಕೀಯ ಮತ್ತು ದಂತವೈದ್ಯಕೀಯ ಕೋರ್ಸುಗಳ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಇಚ್ಚಿಸಿರುವವರೂ ಸಹ Choice 1 ಅನ್ನು ಆಯ್ಕೆ ಮಾಡಿಕೊಳ್ಳುವ ಮೊದಲು ಯೋಚಿಸಿ ಪೋಷಕರೊಡನೆ ಚರ್ಚಿಸಿ ನಿರ್ಧರಿಸಲು ಸೂಚಿಸಿದೆ.

## CHOICES ಗಳ ವಿವರಣೆ

**Choice-1** – ನನಗೆ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಸಂಪೂರ್ಣವಾಗಿ ಇಷ್ಟವಾಗಿದ್ದು ನಾನು ಕಾಲೇಜಿಗೆ ಸೇರುತ್ತೇನೆ, ನನಗೆ ಯಾವುದೇ ಬದಲಾವಣೆ ಅವಶ್ಯಕತೆ ಇರುವುದಿಲ್ಲ. ಮುಂದಿನ ಸುತ್ತುಗಳಲ್ಲಿ (ಯುಜಿನೀಟ್ ವೈದ್ಯಕೀಯ ಅಥವಾ ದಂತ ವೈದ್ಯಕೀಯ, ಇಂಜಿನಿಯರಿಂಗ್ / ಆರ್ಕಿಟೆಕ್ಚರ್ / ಫಾರ್ಮ ಸೈನ್ಸ್ / ವೆಟರಿನರಿ / ಫಾರ್ಮಸಿ, ನ್ಯಾಚರೋಪತಿ ಮತ್ತು ಯೋಗ ಮುಂತಾದ ಕೋರ್ಸುಗಳಿಗೆ) ಭಾಗವಹಿಸಲೂ ಸಹ ನನಗೆ ಇಷ್ಟವಿರುವುದಿಲ್ಲ, ಆದ್ದರಿಂದ ನನ್ನನ್ನು ಮುಂದಿನ ಯಾವುದೇ ಸುತ್ತುಗಳಲ್ಲಿ ಸೀಟು ಹಂಚಿಕೆಗೆ ಪರಿಗಣಿಸಬಾರದು. ನಾನು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸಿ, ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ಕಾಲೇಜಿನಲ್ಲಿ ನಿಗದಿತ ದಿನಾಂಕದೊಳಗೆ ಪ್ರವೇಶ ಪಡೆಯುತ್ತೇನೆ ನಂತರ ಲಾಗಿನ್ ಮಾಡಿ ಕಾಲೇಜಿನಲ್ಲಿ ಪ್ರವೇಶ ಪಡೆದ ಬಗ್ಗೆ ಮಾಹಿತಿಯನ್ನು ಸಲ್ಲಿಸುತ್ತೇನೆ ಎಂದು ಧೃಡೀಕರಿಸುತ್ತೇನೆ.

**ಕ್ರಮ:** ಅಭ್ಯರ್ಥಿಗಳು ಈ ಮೇಲಿನ ರೀತಿಯಲ್ಲಿ ಕ್ರಮವಹಿಸುವುದಾಗಿದ್ದರೆ, ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್‌ನಲ್ಲಿ **Choice 1**ಅನ್ನು ಆಯ್ಕೆ ಮಾಡಿಕೊಂಡು ಮುಂದಿನ ಕ್ರಮವಹಿಸಬಹುದು.

**ಮುಖ್ಯವಾದುದು:** **Choice 1**ಅನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳು ಯುಜಿಸಿಇಟಿ – 2021ರ **ಇಂಜಿನಿಯರಿಂಗ್ / ಆರ್ಕಿಟೆಕ್ಚರ್ / ಕೃಷಿ ವಿಜ್ಞಾನ / ವೆಟರಿನರಿ / ಫಾರ್ಮ ಸೈನ್ಸ್ ಅಥವಾ ಯುಜಿನೀಟ್–2021 ವೈದ್ಯಕೀಯ / ದಂತವೈದ್ಯಕೀಯ ಸೀಟು ಹಂಚಿಕೆಯ** ಮುಂದಿನ ಯಾವುದೇ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆಯುವುದಿಲ್ಲ.

ಶುಲ್ಕವನ್ನು ಪಾವತಿಸಿ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿ ಕಾಲೇಜಿನಲ್ಲಿ ಪ್ರವೇಶ ಪಡೆಯಲು ವಿಫಲರಾದಲ್ಲಿ ಅಂತಹ ಅಭ್ಯರ್ಥಿಗಳು ಪಡೆದ ಸೀಟುಗಳು ರದ್ದಾಗುತ್ತದೆ ಹಾಗು ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**Choice-2** – ನನಗೆ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಇಷ್ಟವಾಗಿರುತ್ತದೆ ಆದರೆ ನಾನು ಇನ್ನೂ ಉತ್ತಮವಾದ ಸೀಟನ್ನು ಪಡೆಯಲು ಮುಂದಿನ ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತೇನೆ. ಮುಂದಿನ ಎರಡನೇ ಸುತ್ತಿನಲ್ಲಿ ಮೆರಿಟ್ ಆಧಾರದ ಮೇಲೆ higher order options ಗಳಲ್ಲಿ ಯಾವುದೇ ಸೀಟು ಹಂಚಿಕೆಯಾದಲ್ಲಿ, ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸಿ, ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ಕಾಲೇಜಿನಲ್ಲಿ ನಿಗದಿತ ದಿನಾಂಕದೊಳಗೆ ಪ್ರವೇಶ ಪಡೆಯುತ್ತೇನೆ, ಒಂದುವೇಳೆ ಮುಂದಿನ ಎರಡನೇ ಸುತ್ತಿನಲ್ಲಿ ಮೆರಿಟ್ ಆಧಾರದ ಮೇಲೆ higher order options ಗಳಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ, ಈಗಾಗಲೇ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸಿ ಪ್ರವೇಶ ಪಡೆಯಲು ಇಚ್ಛಿಸುತ್ತೇನೆ ಎಂದು ಧೃಡೀಕರಿಸುತ್ತೇನೆ.

ಕ್ರಮ: ಅಭ್ಯರ್ಥಿಗಳು ಈ ಮೇಲಿನ ರೀತಿಯಲ್ಲಿ ಕ್ರಮವಹಿಸುವುದಾಗಿದ್ದರೆ, ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್‌ನಲ್ಲಿ Choice 2 ಅನ್ನು ಆಯ್ಕೆ ಮಾಡಿಕೊಂಡು ಎರಡನೇ ಸುತ್ತಿನಲ್ಲಿ ಭಾಗವಹಿಸಬಹುದು. Choice 2 ಅನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸುವ ಅಗತ್ಯವಿರುವುದಿಲ್ಲ.

**ಮುಖ್ಯವಾದುದು:** ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟನ್ನು ತಮ್ಮ ಬಳಿ ಇಟ್ಟುಕೊಂಡು (Hold ಮಾಡಿ) ಎರಡನೇ ಸುತ್ತಿನಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳಿಗೆ ಎರಡನೇ ಸುತ್ತಿನಲ್ಲಿ higher order options ಗಳಿಗೆ ಮಾತ್ರ ಸೀಟು ಆಯ್ಕೆಗೆ ಪರಿಗಣಿಸಲಾಗುವುದು. ಎರಡನೇ ಸುತ್ತಿನಲ್ಲಿ ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಾರಂಭಿಸಿದ ನಂತರ ಮೊದಲನೇ ಸುತ್ತಿನಲ್ಲಿ ಅಭ್ಯರ್ಥಿಗಳು ದಾಖಲಿಸಿದ higher order options ಗಳನ್ನು ಮಾತ್ರ ತೋರಿಸಲಾಗುವುದು, ಅಭ್ಯರ್ಥಿಗಳು higher order options ಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ಆದ್ಯತಾ ಕ್ರಮಗಳನ್ನು ಮಾರ್ಪಡಿಸಿಕೊಳ್ಳಬಹುದು ಅಥವಾ ಯಾವುದಾದರೂ options ಬೇಡವಾದಲ್ಲಿ ತೆಗೆದು ಹಾಕಬಹುದು.

ವಿವರಣೆ: Choice-2 ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಭಾಗವಹಿಸಲು ಇಚ್ಛಿಸಿರುತ್ತಾರೆ ಎಂದರೆ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗಿಂತ ಉತ್ತಮವಾದ ಸೀಟನ್ನು ಆಯ್ಕೆ ಮಾಡಿಕೊಳ್ಳಲು ಭಾಗವಹಿಸುತ್ತಾರೆ. ಎರಡನೇ ಸುತ್ತಿನಲ್ಲಿ ಅಭ್ಯರ್ಥಿಗಳಿಗೆ ಯಾವುದೇ ಮೇಲ್ಪಟ್ಟ ಆದ್ಯತೆಗಳ ಸೀಟು ಅಂದರೆ ಹಂಚಿಕೆಯಾದ ಸೀಟಿನ ಮೇಲ್ಪಟ್ಟ ಇಚ್ಛೆ / ಆಯ್ಕೆಗಳು (Higher order Options means, options entered above the allotted option) ದೊರಕದಿದ್ದಲ್ಲಿ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟೇ ಉಳಿಯುತ್ತದೆ.

**ಗಮನಿಸಿ:** ಅಭ್ಯರ್ಥಿ ತಮ್ಮ ರ್‍ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ. ಇಚ್ಛೆ / ಆಯ್ಕೆಗಳನ್ನು ಹೊಸದಾಗಿ ಸೇರಿಸಲು ಅವಕಾಶವಿರುವುದಿಲ್ಲ. ಒಂದುವೇಳೆ **ಸೀಟ್ ಮ್ಯಾಟ್ರಿಕ್ಸ್‌ಗೆ ಹೊಸದಾಗಿ ಕಾಲೇಜು ಅಥವಾ ಕೋರ್ಸುಗಳು ಸೇರ್ಪಡೆಯಾದಲ್ಲಿ ಮಾತ್ರ** options ಗಳನ್ನು ಸೇರಿಸಲು ಅವಕಾಶವಿರುತ್ತದೆ.

**Choice-3:** ಅಭ್ಯರ್ಥಿಯು ತನಗೆ ಮೊದಲ ಸುತ್ತಿನಲ್ಲಿ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ, ನಾನು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟನ್ನು ರದ್ದುಪಡಿಸಿಕೊಂಡು ಮುಂದಿನ ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತೇನೆ ಎಂದು ಧೃಡೀಕರಿಸುತ್ತೇನೆ.

ಕ್ರಮ: ಅಭ್ಯರ್ಥಿಗಳು ಈ ಮೇಲಿನ ರೀತಿಯಲ್ಲಿ ಕ್ರಮವಹಿಸಲು ನಿರ್ಣಯಿಸಿದರೆ Choice-3 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಮುಖ್ಯವಾದುದು: Choice-3 ಅನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸುವ ಅಗತ್ಯವಿರುವುದಿಲ್ಲ. Choice-3 ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ರದ್ದುಪಡಿಸಿಕೊಂಡು (ತಮ್ಮೊಡನೆ ಉಳಿಸಿಕೊಳ್ಳದೆ) ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಎಡರನೇ ಸುತ್ತಿನಲ್ಲಿ ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯಾದಲ್ಲಿ ಮಾತ್ರ ಅವರು ಸೀಟನ್ನು ಆಯ್ಕೆ ಮಾಡಿಕೊಳ್ಳಬೇಕು.

Choice-3 ಅಭ್ಯರ್ಥಿಗಳಿಗೆ ಎರಡನೇ ಸುತ್ತಿನಲ್ಲಿ ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಾರಂಭಿಸಿದ ನಂತರ ಮೊದಲನೇ ಸುತ್ತಿನಲ್ಲಿ ಅಭ್ಯರ್ಥಿಗಳು ದಾಖಲಿಸಿದ ಎಲ್ಲಾ **options** ಗಳನ್ನು ತೋರಿಸಲಾಗುವುದು (ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗಿ ಅಭ್ಯರ್ಥಿಯು ರದ್ದುಪಡಿಸಿಕೊಂಡ **option** ಅನ್ನು ಹೊರತುಪಡಿಸಿ ಉಳಿದ ಎಲ್ಲಾ ಇಚ್ಛೆ / ಆಯ್ಕೆಗಳು), ಅಭ್ಯರ್ಥಿಗಳು **options** ಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ಆದ್ಯತಾ ಕ್ರಮಗಳನ್ನು ಮಾರ್ಪಡಿಸಿಕೊಳ್ಳಬಹುದು ಅಥವಾ ಯಾವುದಾದರೂ **options** ಬೇಡವಾದಲ್ಲಿ ತೆಗೆದು ಹಾಕಬಹುದು.

**ಗಮನಿಸಿ:** ಅಭ್ಯರ್ಥಿ ತಮ್ಮ ರ್‍ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ.

ಇಚ್ಛೆ / ಆಯ್ಕೆಗಳನ್ನು ಹೊಸದಾಗಿ ಸೇರಿಸಲು ಅವಕಾಶವಿರುವುದಿಲ್ಲ. ಒಂದುವೇಳೆ **ಸೀಟ್ ಮ್ಯಾಟ್ರಿಕ್ಸ್‌ಗೆ ಹೊಸದಾಗಿ ಕಾಲೇಜು ಅಥವಾ ಕೋರ್ಸುಗಳು ಸೇರ್ಪಡೆಯಾದಲ್ಲಿ ಮಾತ್ರ options** ಗಳನ್ನು ಸೇರಿಸಲು ಅವಕಾಶವಿರುತ್ತದೆ.

**Choice-4:** ಅಭ್ಯರ್ಥಿಯು ತಮಗೆ ಮೊದಲ ಸುತ್ತಿನಲ್ಲಿ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ ನನಗೆ ದೊರಕಿರುವ ಸೀಟು ಬೇಡ ಹಾಗೂ ನನಗೆ ಮುಂದಿನ ಸುತ್ತಿನಲ್ಲೂ ಸಹ ಯಾವುದೂ ಸೀಟು ತೆಗೆದುಕೊಳ್ಳಲು ಇಷ್ಟವಿಲ್ಲ, ನಾನು ಬೇರೆ ಸಂಸ್ಥೆಯಿಂದ ಸೀಟು ತೆಗೆದುಕೊಳ್ಳುತ್ತೇನೆ ಎಂದು ಧೃಡೀಕರಿಸುತ್ತೇನೆ.

**ಕ್ರಮ: ಅಭ್ಯರ್ಥಿಗಳು** ಈ ಮೇಲಿನಂತೆ ನಿರ್ಣಯಿಸಿದಲ್ಲಿ, Choice-4 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬಹುದು.

ಗಮನಿಸಿ: Choice-4 ಅನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಯು ಯುಜಿಸಿಇಟಿ-2021ರ **ಇಂಜಿನಿಯರಿಂಗ್ / ಆರ್ಕಿಟೆಕ್ಚರ್ / ಕೃಷಿ ವಿಜ್ಞಾನ / ವೆಟರಿನರಿ / ಫಾರ್ಮಸೈನ್ಸ್ ಕೋರ್ಸುಗಳ** ಸೀಟು ಹಂಚಿಕೆಗೆ ಮುಂದಿನ ಯಾವುದೇ ಸುತ್ತುಗಳಲ್ಲಿ ಭಾಗವಹಿಸಲು ಅರ್ಹನಾಗುವುದಿಲ್ಲ.

ಸಹಿ/-

ದಿನಾಂಕ: 27-11-2021 ಕಾರ್ಯನಿರ್ವಾಹಕ ನಿರ್ದೇಶಕರು.